ಓ.ಎಸ್ **208/2019**
ಪಿ ಡಬ್ಲ್ಯು **2**

<u>ದಿನಾಂಕಃ **19.07.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
<u>**ಪಾಟಿ ಸವಾಲು 1, 3 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಆರ್ ಎಮ್ ವಕೀಲರಿಂದಃ-**</u>

1. ನನ್ನ ಮುಖ್ಯ ವಿಚಾರಣೆಯ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನಗೆ ಶಿರಾಳಕೊಪ್ಪದ ಅಕ್ಕಿಪೇಟೆಯಲ್ಲಿ ಮನೆಯಿದೆ ಎಂದರೆ ಸರಿ. ಪ್ರತಿವಾದಿಗೆ ಸಣ್ಣಬ್ಯಾನದಕೇರಿ ಶಿರಾಳಕೊಪ್ಪದಲ್ಲಿ ಮನೆ ಇದೆ ಎಂದರೆ ಸರಿ. ನಮ್ಮ ಮನೆಯಿಂದ ಪ್ರತಿವಾದಿಯರ ಮನೆಗೆ 200 ರಿಂದ 300 ಅಡಿ ಅಂತರವಿರುತ್ತದೆ. ವಾದಿ ಮತ್ತು ಪ್ರತಿವಾದಿಯರು ನನಗೆ ಸಂಬಂಧಿಕರಾಗುತ್ತಾರೆ. ವಾದಿಯ ತಂದೆ ಶಾದ್ ಅಲಿಖಾನ್ ಇವರು ಅನಾರೋಗ್ಯದಿಂದ ನಿಧನ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ಆರೋಗ್ಯದಿಂದ ಇದ್ದರು ಎಂದು ನುಡಿಯುತ್ತಾರೆ. ಸದರಿ ಶಾದ್ ಅಲಿಖಾನ್ ಇವರು ನಿಧನದ ಪೂರ್ವದಲ್ಲಿ ಓಡಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಶಾದ್ ಅಲಿಖಾನ್ ನಿಧನ ಹೊಂದಿದ ನಂತರ ಮನೆಯ ಯಜಮಾನಿಕೆಯನ್ನು 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಮಾಡುತ್ತಿದ್ದರು. 1 ರಿಂದ 3 ನೇ ವಾದಿಯ ಮದುವೆ ಅವರು ನಿಧನ ಹೊಂದುವ ಮೊದಲೇ ಆಗಿತ್ತು. ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳ ಮದುವೆಯನ್ನು ತವರು ಮನೆಯಲ್ಲಿ ಮಾಡಿಕೊಡಲಾಗುತ್ತದೆ ಎಂದರೆ ಸರಿ. ತಂದೆ-ತಾಯಿಗಳ ಶಕ್ತ್ರಿಗನುಗುಣವಾಗಿ ಮದುವೆ ಮಾಡಿಕೊಡಲಾಗುತ್ತದೆ.

2. ವಾದಿಯರ ಮದುವೆಯನ್ನು ಅವರ ತಂದೆ-ತಾಯಿ ಮತ್ತು ಸಹೋದರರು ಸೇರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರ ತಂದೆ-ತಾಯಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರ ತಂದೆಗೆ ಮದುವೆಯ ಖರ್ಚು ವೆಚ್ಚ ನಿಭಾಯಿಸುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆರ್ಥಿಕ ಸಾಮರ್ಥ್ಯ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರ ಮದುವೆಯನ್ನು ಅವರ ತಂದೆ ಮಾಡಿರುವುದಿಲ್ಲ, ಪ್ರತಿವಾದಿಯರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ವಾದಿಯರ ತಂದೆ ವಾದಿಯರ ಮದುವೆ ಮಾಡುವ ಖರ್ಚಿನ ಸಂಬಂಧ ದಾವಾ ಎ ಶೆಡ್ಯೂಲ್ ಸ್ವತ್ತನ್ನು ಭೋಗ್ಯಕ್ಕೆ ಹಾಕಿ ಅದರಿಂದ ಬಂದ ಹಣದಿಂದ, ಮದುವೆ ಮಾಡಿದ್ದರು ಎಂದರೆ ಸಾಕ್ಷಿಯು ಉಳುಮೆ ಮಾಡಲು ಆಗದ ಕಾರಣ ಗುತ್ತಿಗೆ ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ವಾದಿಯರ ತಂದೆ ಬಿ ಶೆಡ್ಯೂಲ್ ಸ್ವತ್ತಿನ ಸಂಬಂಧ ಬಸವೇಶ್ವರ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಾಲ ಪಡೆದುಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಸಾಲವನ್ನು ಹಿಂತಿರುಗಿಸುವ ಸಂಬಂಧ ಮಲ್ಲಿಕಾರ್ಜುನ ಎನ್ನುವವರಿಗೆ ಬಿಶೆಡ್ಯೂಲ್ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿಯರು ಭೋಗ್ಯಕ್ಕೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಈ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. 2 ರಿಂದ 4 ನೇ ಪ್ರತಿವಾದಿಯರು ಹಣ್ಣು, ತರಕಾರಿ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಅವರು ಭಾಡಿಗೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರು ಸಾಲ ತೀರಿಸುವ ಸಂಬಂಧ ಮನೆಯನ್ನು ಭೋಗ್ಯಕ್ಕೆ ಕೊಟ್ಟು ಭಾಡಿಗೆ ಮನೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಸ್ವಂತ ಮನೆಯಲ್ಲಿದ್ದಾರೆ. ಶಾದ್ ಅಲಿಖಾನ್ ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ಭೋಗ್ಯಕ್ಕೆ ಹಾಕಿ ಪ್ರತಿವಾದಿಯರು ಸಾಲ ಪಡೆದು ವಾದಿಯರ ಮದುವೆ ಮಾಡಿದ್ದಾರ ಎಂದರೆ ಸಾಕ್ಷಿಯು ಉಳುಮೆ ಮಾಡಲಾಗದೇ, ದಾವಾ ಸ್ವತ್ತುಗಳನ್ನು ಗುತ್ತಿಗೆ ಕೊಟ್ಟಿರಬಹುದು, ಆದರೆ ಮದುವೆಯನ್ನು ವಾದಿಯರ ತಂದೆಯೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಓ.ಎಸ್ 208/2019**
**ಪಿ ಡಬ್ಲ್ಯು 2**

2 ನೇ ಪ್ರತಿವಾದಿ ಪರ ವಕೀಲರು, ಪ್ರತಿವಾದಪತ್ರವನ್ನು ಹಾಕದ ಕಾರಣ ಮತ್ತು ಗೈರು ಹಾಜರಾದ ಕಾರಣ ಪಾಟಿ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.